ಹೆಜ್ಜೆಯಿಕ್ಕುತ್ತಾ ಚಾವಡಿ ದಾಟಿದ್ದ. ಮಧ್ಯಾಹ್ನದ ವರೆಗೂ ಯಾರೂ ಅತ್ತಿತ್ತ ಮಾತನಾಡಿರಲಿಲ್ಲ. ಅಕ್ಕು ಕೋಣೆಯಲ್ಲಿ ಮುಸುಕಿಕ್ಕಿ ಮಲಗಿದರೆ, ಬಾಕಿ ಉಳಿದ ಅಡುಗೆಯನ್ನು ಅತ್ತೆಯೇ ಮಾಡಿದ್ದರು. ದೇಯಿ, ಚನಿಯ ಮುಳ್ಳಿನ ಮೇಲೆ ಕೂತಂತೆ ಕೂತು ಮಧ್ಯಾಹ್ನ ಮಾಡಿದ್ದರು. ಊಟದ ಹೊತ್ತು ಕಳೆದರೂ ಮಹಾರಾಯನ ಸುಳಿವಿರಲಿಲ್ಲ. ಉಳಿದವರು ಉಂಡ ಶಾಸ್ತ್ರ ಮಾಡಿದ್ದರು. ಮೂರು ಗಂಟೆ ಹೊತ್ತಿಗೆ ಮೈದುನ ಪೇಟೆಯಿಂದ ಬಾಡಿಗೆ ಜೀಪು ತಂದ. ಅಕ್ಕು ನರಳಿಕೊಂಡೆ ಜೀಪು ಹತ್ತಿದ್ದಳು. ಹೊರಡುವಾಗ ದೇಯಿ ಬೀಗಿತ್ತಿಯಲ್ಲಿ, “ಬರುತ್ತೇನೆ ಅತ್ತಿಗೆ” ಎಂದಳು. “ಹೋಗಿಬನ್ನಿ. ಎರಡು ವಾರ ಕಳೆದು ನಾವು ಬರುತ್ತೇವೆ.” ಎಂದ ಅಕ್ಕುವಿನ ಅತ್ತೆಯ ಕಣ್ಣುಗಳು ಒದ್ದೆಯಾಗಿದ್ದವು.

ರಾತ್ರಿ ಬೆಳಗಾಗುವ ವರೆಗೆ ಅಮ್ಮ, ಮಗಳು ಕಣ್ಣೀರಿನಲ್ಲಿ ಚಾಪೆ ತೋಯಿಸಿದ್ದರು. ಬೆಳಗ್ಗೆ ಅಕ್ಕುವನ್ನು ನೋಡಲು ಬಂದ ಅಂತಕ್ಕನೂ ಕಣ್ಣೀರು ಮಿಡಿದಿದ್ದಳು. ಅಕ್ಕುವಿನ ಅಣ್ಣ ಶೀನನಂತೂ, “ಈಗಲೇ ಬೆದ್ರಕ್ಕೆ ಹೋಗಿ ರಂಡೇ ಮಗನನ್ನು ಕೊಚ್ಚಿ ಹಾಕಿಯೇನು” ಎಂದು ಹಾರಾಡಿದ್ದ. ಗೋಪಾಲ ಶೆಟ್ರು ಅಯ್ಯಪ್ಪ ಬೆಯ್ಯ್ಯರನ್ನು ಕರೆಸಿ ಅಕ್ಕುವಿಗೆ ಮದ್ದು ಮಾಡಿಸಿದ್ದರು. ಎರಡು ವಾರದ ಮದ್ದಿನಲ್ಲೇ ಮೈಯ್ಯ ನೋವು ವಾಸಿಯಾಗಿದ್ದರೂ ಮನಸ್ಸಿಗೆ ಆದ ಗಾಯ ಯಾರದ್ದೂ ಆರಿರಲಿಲ್ಲ. ಆದುದರಿಂದಲೇ ಎರಡು ವಾರ ಕಳೆದು ಅಕ್ಕುವನ್ನು ಕರೆದೊಯ್ಯಲು ಜೀಪು ಕಟ್ಟಿಸಿ ಬಂದ ಅಕ್ಕುವಿನ ಅತ್ತೆ, ಮಾವನೊಂದಿಗೆ ಚನಿಯ, “ಸ್ವಲ್ಪ ಸಮಯ ಕಳೀಲಿ... ಹುಡುಗಿ ಚೂರು ಪಚ್ಚೆ ಹಿಡೀಲಿ” ಅಂದಿದ್ದರೆ, ಶೀನನಂತೂ ಹಿರಿಯರು ಎಂದು ಕೂಡ ನೋಡದೆ, “ಕೊಲ್ಲಲಿಕ್ಕೆ ಕೊಡಲು ನಮಗೆ ಏನು ಹೆಣ್ಣು ಜಾಸ್ತಿ ಆಗಿಲ್ಲ. ಹೆಂಡತಿ ಬೇಕಿದ್ದವ ಅವನೇ ಬಂದು ಮಾಫಿ ಕೇಳಲಿ.” ಎಂದು ಎದುರಾ ಎದುರೆ ಹೇಳಿ ಬಿಟ್ಟಿದ್ದ. ಮುಖ ಸಣ್ಣದು ಮಾಡಿ ಜೀಪು ಹತ್ತಿದ ಅತ್ತೆ ಮಾವನನ್ನು ನೋಡಿ ಅಕ್ಕುವಿಗೆ ಸಂಕಟವಾಗಿತ್ತು. ಅತ್ತೆ ಮಾವ ಬಂದು ಹೋದ ಎರಡೇ ದಿನಕ್ಕೆ ಅಕ್ಕುವಿಗೆ ವಾಂತಿ ಶುರುವಾಗಿತ್ತು. ಅನುಭವಿಯಾದ ದೇಯಿಗೆ ವಿಷಯ ಅರ್ಥವಾಗಿತ್ತು. ಆದರೆ, ಬೆದ್ರದ ಹೆಸರೆತ್ತುವಾಗಲೇ ಉರಿದು ಬೀಳುವ ಗಂಡ, ಮಗನೆದಿರು ಪ್ರಸ್ತಾಪಿಸುವ ಧೈರ್ಯ ಆಗಲಿಲ್ಲ. ತಿಂಗಳು ಏಳು ಹಿಡಿದಾಗ ಮಗಳ ಭವಿಷ್ಯ ನೆನೆದು ಸೀಮಂತದ ಶಾಸ್ತ್ರಕ್ಕೆಂದು ಬೆದ್ರಕ್ಕೆ ಹೇಳಿ ಕಳಿಸುವ ಧೈರ್ಯ ಮಾಡಿದ್ದಳು. “ಊರಲ್ಲಿ ಯಾರಿಗೋ ಆದ ಬಸಿರಿಗೆ ನಾವು ಸೀಮಂತ ಮಾಡುವ ಅಗತ್ಯ ಇಲ್ಲ” ಅಂತ ಮರು ಉತ್ತರ ಬಂದಿತ್ತು ಬೆದ್ರದಿಂದ. ಅದೇ ಕೊನೆ! ಆಮೇಲೆ ಆ ಮನೆಯಲ್ಲಿ ಬೆದ್ರದ ಹೆಸರು ಕೂಡ ಯಾರೂ ಎತ್ತಿರಲಿಲ್ಲ.

ಏಳು ತಿಂಗಳು ತುಂಬುವಾಗ ಅಂತಕ್ಕನೆ ಮುಂದೆ ನಿಂತು ಸೀಮಂತದ ಶಾಸ್ತ್ರ ನಡೆಸಿದ್ದಳು. ಹೆರಿಗೆ ಸಮಯದಲ್ಲೂ ಒಂದಷ್ಟು ಕಾಯಿ, ಎಣ್ಣೆ, ಪಥ್ಯದ ಸಾಮಾನು ಇತ್ಯಾದಿ ಗುತ್ತಿನ ಮನೆಯಿಂದ ಬಂದಿತ್ತು. ಮಗುವಿಗೆ ಆರು ತಿಂಗಳಾಗುವಾಗಲೇ ಅದನ್ನು ಬೆನ್ನಿಗೆ ಕಟ್ಟಿಕೊಂಡು ಬೈಲಿಗೆ ಇಳಿದಿದ್ದಳು ಅಕ್ಕು. ಈ ಮಧ್ಯೆ ಶೀನನಿಗೂ ಮದುವೆಯಾಗಿತ್ತು. ಅತ್ತಿಗೆಯಾಗಿ ಬಂದವಳೋ ಘಟವಾಣಿ! ಮದುವೆಯಾಗಿ ಮೂರೇ ತಿಂಗಳಲ್ಲಿ ಶೀನನನ್ನು ಪೂರ್ತಿ ಬದಲಾಯಿಸಿದ್ದಳು ಹೆಂಡತಿ. ತಂಗಿ ಎಂದರೆ ಜೀವ ಬಿಡುತ್ತಿದ್ದವ ತಂಗಿಯ ನೆರಳು ಕೂಡ ನೋಡದಂತಾಯಿತು. ನಿತ್ಯ ರಾಣಾ ರಂಪ... ಬೇಜಾರು ಹಿಡಿದ ಚನಿಯ ಪಾರ್ಶ್ವವಾಯು ಬಡಿದು ಒಂದಷ್ಟು ದಿನ ಚಾಪೆ ಹಿಡಿದವ ಅಲ್ಲಿಗೇ ಕಣ್ಣು ಮುಚ್ಚಿದ್ದ. ಅಪ್ಪ ತೀರಿ ಮೂರೇ ತಿಂಗಳಲ್ಲಿ ಶೀನನ ಹೆಂಡತಿ ಅವನನ್ನೂ ಕಟ್ಟಿಕೊಂಡು ತೌರು ಸೇರಿದ್ದಳು. ಆಮೇಲೆ ಅಮ್ಮ, ಮಗಳ ಬದುಕಿನ ಬಂಡಿ ಪೂರ್ತಿ ರಮೇಶನ ಸುತ್ತಲೇ ತಿರುಗಿತ್ತು. ಕಣ್ಣು ಬಿಡುವಾಗಲೇ ಅಮ್ಮ, ಅಜ್ಜಿಯರ ಬಂಘ ನೋಡಿ ಅರಿವಿದ್ದ ಹುಡುಗ ತನ್ನ ಮೇಲೆ ಅವರಿತ್ತ ಭರವಸೆಯನ್ನು ಹುಸಿಗೊಳಿಸಿರಲಿಲ್ಲ. ಶಾಲೆಗೇ ಹೋಗುವಾಗಲೇ ಅಮ್ಮ, ಅಜ್ಜಿಯರೊಂದಿಗೆ ಗುತ್ತಿನ ಕೆಲಸಕ್ಕೆ ಕೈ ಜೋಡಿಸಿದವ ಸಿಕ್ಕಿದ ಪುಡಿಗಾಸುಗಳನ್ನು ಜಾಗ್ರತೆಯಿಂದ ತಂದು ಅಮ್ಮನ ಕೈಯ್ಯಲ್ಲಿಡುತ್ತಿದ್ದ. ಕಲೀಲಿಕ್ಕು ಜಾಣ ಎನಿಸಿಕೊಂಡಿದ್ದವ ಹತ್ತನೇ ಕ್ಲಾಸಲ್ಲಿ ಒಂದನೇ ನಂಬರಲ್ಲಿ ಪಾಸಾದಾಗ ಅಂತಕ್ಕನೆ